**DEPARTMENT OF GENERAL EDUCATION, KERALA**

# FIRST TERM EVALUATION 2015 -16

## KANNADA PAPER - II Sample Question Paper - 2015-16

## ಕನ್ನಡ - II ಮಾದರಿ ಪ್ರಶ್ನೆಗಳು

**STD VIII** — **Score : 40** — **Time : 1½ hrs**

---

**ಕಲಿಕಾ ಸಾಧನೆ**

ನಿಯತಕಾಲಿಕಗಳನ್ನು ಮತ್ತು ಇತರ ಪುಸ್ತಕಗಳನ್ನು ಓದಿ ಅನುಭವಗಳನ್ನು ಹಂಚಿಕೊಳ್ಳುವುದು.

**ಚಿಂತನಾ ಸಾಮರ್ಥ್ಯ**

ಕಥೆಗಳನ್ನು ಓದಿ ತಿಳಿದ ಆಶಯವನ್ನು ಪ್ರಯೋಗಿಸುವುದು.

**ಘಟಕ 1**

1. ಭಾರತ ಮಾತೆಯ ಮಕ್ಕಳು ನಾವು
ಸೋದರರಂತೆ ಬಾಳುವೆವು

ಇದು ರಾಷ್ಟ್ರೀಯ ಭಾವೈಕ್ಯವನ್ನು ಸೂಚಿಸುವ ಘೋಷಣವಾಕ್ಯವಾಗಿದೆ. ಇಂತಹ ಇನ್ನೊಂದು ಘೋಷಣವಾಕ್ಯವನ್ನು ಬರೆಯಿರಿ. (2)

**ಮೌಲ್ಯಮಾಪನ ಸೂಚಕಗಳು**

- ರಾಷ್ಟ್ರೀಯ ಭಾವೈಕ್ಯವನ್ನು ಸೂಚಿಸುವ, ಪ್ರಾಸಬದ್ಧವಾಗಿರುವ, ಎರಡು ಸಾಲುಗಳಿರುವ ಘೋಷಣವಾಕ್ಯವನ್ನು ಬರೆಯಲಾಗಿದೆ. (2)
- ಎರಡು ಸಾಲುಗಳಿರುವ ರಾಷ್ಟ್ರೀಯ ಭಾವೈಕ್ಯವನ್ನು ಸೂಚಿಸುವ ಘೋಷಣವಾಕ್ಯ ಬರೆಯಲಾಗಿದೆ. (1)

**ಕಲಿಕಾ ಸಾಧನೆ**

ವೈವಿಧ್ಯಮಯ ಸಾಹಿತ್ಯ ಪ್ರಕಾರಗಳನ್ನು ಓದಿ ಆಸ್ವಾದಿಸಿ ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ ಇತ್ಯಾದಿಗಳನ್ನು ತಯಾರಿಸುವುದು.

**ಚಿಂತನಾ ಸಾಮರ್ಥ್ಯ**

ಆಶಯ ವಿಶ್ಲೇಷಿಸಿ, ಹೊಂದಿಸಿ ಬರೆಯುವುದು.

**ಘಟಕ 1**

2. ಕೆಳಗೆ 'ವಿಶ್ವಶಾಂತಿ' ಕವನದ ಆಶಯವಿರುವ ಸಾಲುಗಳನ್ನು ಕೊಡಲಾಗಿದೆ. ಈ ಆಶಯವನ್ನು ವ್ಯಕ್ತಪಡಿಸುವ ಕವನದ ಸಾಲುಗಳನ್ನು ಆರಿಸಿ ಬರೆಯಿರಿ.

- ನಾವೆಲ್ಲರೂ ಒಂದೇ ಕಡೆಗೆ ಸಾಗುತ್ತೇವೆ.
- ನಾವೆಲ್ಲರೂ ಒಂದೇ ಗಾಳಿಯನ್ನು ಉಸಿರಾಡುತ್ತೇವೆ ಒಂದೇ ನೀರನ್ನು ಕುಡಿಯುತ್ತೇವೆ.
- ಮಾನವರಾದ ನಮ್ಮೆಲ್ಲರದೂ ಒಂದೇ ನೆಲ, ನಾವೆಲ್ಲರೂ ಒಂದೇ ಕುಲ, ಒಂದೇ ಜಾತಿ (3)

ಒಂದೆ ಗಾಳಿಯೊಳುಸಿರು ಒಂದೆ ನೀರ್ನುಡಿಯುವೆವು
ನಾವು ನೀವೆಂದೆಂಬ ಭೇದ ಸಲ್ಲ
ಒಂದೆ ಮನೆಯಲಿ ಹುಟ್ಟಿ ಒಂದೆ ಬಾಳನು ಬದುಕಿ
ಒಂದೆಡೆಗೆ ಸಾಗುವೆವು ಕೇಳಿ ಸೊಲ್ಲ ॥
ನಮ್ಮದೊಂದೇ ನೆಲವು ನಮ್ಮದೊಂದೇ ಕುಲವು
ನಮ್ಮದೊಂದೇ ಜಾತಿ – ಮಾನವರದೆಲ್ಲ
ಆವ ಪಾತ್ರೆಯೊಳಿಟ್ಟರೇನು ಜಲರಾಶಿಯನು
ನೀರು ನೀರೆ ಹೊರತು ಬೇರೆಯಲ್ಲ ॥

**ಮೌಲ್ಯಮಾಪನ ಸೂಚಕಗಳು**

- ಆಶಯಕ್ಕೆ ಸಮಾನವಾದ ಪದ್ಯದ 3 ಸಾಲುಗಳನ್ನು ಗುರುತಿಸಲಾಗಿದೆ. (3)
- ಆಶಯಕ್ಕೆ ಅನುಗುಣವಾದ ಪದ್ಯದ 2 ಸಾಲುಗಳನ್ನು ಗುರುತಿಸಲಾಗಿದೆ. (2)
- ಆಶಯಕ್ಕೆ ಅನುಗುಣವಾದ ಪದ್ಯದ 1 ಸಾಲನ್ನು ಗುರುತಿಸಲಾಗಿದೆ. (1)

**ಕಲಿಕಾ ಸಾಧನೆ**

ವೈವಿಧ್ಯಮಯ ಸಾಹಿತ್ಯ ಪ್ರಕಾರಗಳನ್ನು ಓದಿ ಆಸ್ವಾದಿಸಿ, ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ, ಪ್ರಬಂಧ ಇತ್ಯಾದಿಗಳನ್ನು ರಚಿಸುವುದು.

**ಚಿಂತನಾ ಸಾಮರ್ಥ್ಯ**

ಆಶಯವನ್ನು ಅರ್ಥೈಸಿ ಸ್ವಂತ ಶೈಲಿಯಲ್ಲಿ ವಿವರಿಸಿ ನಿಗಮನಕ್ಕೆ ತಲುಪುವುದು.

**ಘಟಕ 1**

3. ಕೃಷಿಗೆ ಸಂಬಂಧಿಸಿದ 'ಮನೆ ತುಂಬಿಸುವುದು' ಎಂಬ ಆಚರಣೆಯ ರೀತಿ ಸಂಕ್ಷಿಪ್ತವಾಗಿ ಕೆಳಗೆ ಕೊಡಲಾಗಿದೆ.

ಮನೆಯನ್ನೆಲ್ಲ ಸ್ವಚ್ಛಗೊಳಿಸುವುದು – ಯಜಮಾನ ಸ್ನಾನಮಾಡಿ ತೆನೆ ತರುವುದು – ವಿವಿಧ ವೃಕ್ಷಗಳ ಎಲೆಗಳೊಂದಿಗೆ ತೆನೆಯನ್ನು ಕಟ್ಟಿ ತುಳಸಿಕಟ್ಟೆ, ದೇವರಕೋಣೆಗಳಲ್ಲಿ ಇರಿಸುವುದು – ದೇವರೆದುರು ಕಾಯಿ, ಬೆಲ್ಲ, ಸುಟ್ಟ ಹಲಸಿನ ಬೀಜ, ಗೇರುಬೀಜ ಇತ್ಯಾದಿ ಇಟ್ಟು ತೆನೆಗೆ ಹಾಲು ಎರೆಯುವುದು – ಗಂಧ ತೇಡು ತೆನೆಗೆ ಹಚ್ಚುವುದು – ಹೊದಳು, ಉಪ್ಪು ಹಾಕದ ಉಂಡ್ಲಕಾಳು ನೈವೇದ್ಯ ಮಾಡುವುದು – ಹಟ್ಟಿ, ತೊಟ್ಟಿಲು, ತೊಲೆ, ದಾರಂದ, ತೆಂಗಿನ ಮರ ಇತ್ಯಾದಿಗಳಿಗೆ ತೆನೆ ಕಟ್ಟುವುದು. ಕೊನೆಗೆ ಉಳಿದ ತೆನೆ, ಸೊಪ್ಪುಗಳನ್ನು ಒಟ್ಟಿಗೆ ಸೇರಿಸಿ ಮನೆಯ ಮಾಡಿಗೆ ಬಿಸಾಡುವುದು ಇತ್ಯಾದಿ.

ಹೀಗೆಯೇ ನಿಮ್ಮ ಊರಿನಲ್ಲಿ ಆಚರಿಸುವ ಕೃಷಿಗೆ ಸಂಬಂಧಿಸಿದ ಯಾವುದಾದರೊಂದು ಆಚರಣೆಯನ್ನು ವಿವರಿಸಿ ಬರೆಯಿರಿ. (5)

**ಮೌಲ್ಯಮಾಪನ ಸೂಚಕಗಳು**

- ಕೃಷಿಗೆ ಸಂಬಂಧಿಸಿದ 'ಹೊಸ ಅಕ್ಕಿ ಊಟ' , 'ತೆನೆ ಹಬ್ಬ', 'ಗದ್ದೆ ಕೋರಿ' – ಯಾವುದಾದರೊಂದು ಆಚರಣೆಯನ್ನು ಸವಿವರವಾಗಿ ಉತ್ತಮವಾದ ಭಾಷೆ, ಶೈಲಿಯೊಂದಿಗೆ ಬರೆಯಲಾಗಿದೆ. (5)
- ಆಚರಣೆಯ ಕುರಿತು ಆಶಯ ಸ್ಪಷ್ಟತೆಯಿಲ್ಲದಿದ್ದರೂ ವಿವರಿಸಲಾಗಿದೆ. (4)

- ಆಚರಣೆಯನ್ನು ಬರೆಯಲಾಗಿದೆ. ಆಶಯ ಕಡಿಮೆ (3)
- ಮೇಲೆ ಹೇಳಿದ ಆಚರಣೆಯನ್ನೇ ವಾಕ್ಯವಾಗಿ ಬರೆಯಲಾಗಿದೆ. (2)
- ಪ್ರಶ್ನೆಯಲ್ಲಿ ಕೊಟ್ಟ ಆಚರಣೆಯನ್ನೆ ಬರೆಯಲಾಗಿದೆ (1)

**ಕಲಿಕಾ ಸಾಧನೆ**

ಗದ್ಯ, ಪದ್ಯಗಳ ಆಶಯವನ್ನು ತಿಳಿದುಕೊಂಡು ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ, ಪ್ರಬಂಧ ತಯಾರಿಸುವುದು.

**ಚಿಂತನಾ ಸಾಮರ್ಥ್ಯ**

ಪ್ರಶ್ನೆಯನ್ನು ವಿಶ್ಲೇಷಿಸಿ ನಿಗಮನಕ್ಕೆ ತಲುಪುವುದು.

**ಘಟಕ 1**

4. 'ಕೇರಳದ ಪುತ್ತರಿ' ಪಾಠಭಾಗದಲ್ಲಿ ಕೇರಳದ ಮನೆ ಮತ್ತು ದೇವಾಲಯಗಳಲ್ಲಿ ಆಚರಿಸುವ ಪುತ್ತರಿಯ ಕುರಿತು ತಿಳಿದಿರುವಿರಿ.

- ಮನೆಯಲ್ಲಿ ಎಷ್ಟು ವಿಧದ ಪುತ್ತರಿ ಹಬ್ಬಗಳನ್ನು ಆಚರಿಸುತ್ತಾರೆ?
- ಅವುಗಳು ಯಾವುವು?
- ಆ ಹಬ್ಬಗಳನ್ನು ವಿವರಿಸಿರಿ. 5

**ಮೌಲ್ಯಮಾಪನ ಸೂಚಕಗಳು**

- ಎರಡು ವಿಧದ ಹಬ್ಬಗಳು, ಸಣ್ಣ ಪುತ್ತರಿ ಮತ್ತು ದೊಡ್ಡ ಪುತ್ತರಿ, ಹಾಗೂ ಆ ಎರಡೂ ಹಬ್ಬಗಳ ಆಚರಣೆಯನ್ನು ಸ್ಪಷ್ಟವಾಗಿ ಬರೆಯಲಾಗಿದೆ. (5)
- ಎರಡು ವಿಧದ ಹಬ್ಬಗಳು, ಸಣ್ಣಪುತ್ತರಿ ಮತ್ತು ದೊಡ್ಡ ಪುತ್ತರಿ ಮತ್ತು ಯಾವುದಾದರೂ ಒಂದರ ಆಚರಣೆಯನ್ನು ಬರೆಯಲಾಗಿದೆ. (4)
- ಎರಡು ವಿಧದ ಹಬ್ಬಗಳು, ಸಣ್ಣಪುತ್ತರಿ ಮತ್ತು ದೊಡ್ಡಪುತ್ತರಿ ಹಬ್ಬಗಳ ಆಚರಣೆಯನ್ನು ಆಚರಣೆ ಸ್ಪಷ್ಟತೆಯಿಲ್ಲದೆ ಬರೆಯಲಾಗಿದೆ. (3)
- ಎರಡು ವಿಧದ ಹಬ್ಬಗಳು, ಸಣ್ಣ ಪುತ್ತರಿ ಮತ್ತು ದೊಡ್ಡ ಪುತ್ತರಿ ಎಂದು ಬರೆಯಲಾಗಿದೆ. (2)
- ಎರಡು ಹಬ್ಬಗಳ ಹೆಸರು ಮಾತ್ರ ಬರೆಯಲಾಗಿದೆ. (1)

**ಕಲಿಕಾ ಸಾಧನೆ**

ಗದ್ಯ, ಪದ್ಯಗಳ ಆಶಯ ತಿಳಿದು ಪದಶುದ್ಧಿ, ವಾಕ್ಯಶುದ್ಧಿ, ಲೇಖನ ಚಿಹ್ನೆ ಇತ್ಯಾದಿ ಭಾಷಾ ನಿಯಮಗಳನ್ನು ಪಾಲಿಸುವುದು.

**ಚಿಂತನಾ ಸಾಮರ್ಥ್ಯ**

ಪ್ರಶ್ನೆಯನ್ನು ವಿಶ್ಲೇಷಿಸಿ, ಲೇಖನ ಚಿಹ್ನೆಯನ್ನು ಅಳವಡಿಸುವುದು.

**ಘಟಕ – 1**

5. ಕೆಳಗೆ ಕೊಟ್ಟ ಗದ್ಯಭಾಗಕ್ಕೆ ಲೇಖನ ಚಿಹ್ನೆಗಳನ್ನು ಅಳವಡಿಸಿ ಗದ್ಯವನ್ನು ಪುನಾರಚಿಸಿರಿ.
   ಮಕ್ಕಳೇ ನಾಳೆ ಮನೆತುಂಬಿಸುವ ಕಾರ್ಯಕ್ರಮವಿದೆ. ಎಲ್ಲರೂ ಬೇಗ ಏಳುವಿರಿ ತಾನೇ ಎದ್ದುಸ್ನಾನಮಾಡಿ ಅಪ್ಪನ ಜೊತೆಯಲ್ಲಿ ತೆನೆ ತರಲು ಹೋಗಬೇಕು ಎಂದು ಅಮ್ಮ ಹೇಳಿದಳು. (3)

**ಮೌಲ್ಯಮಾಪನ ಸೂಚಕಗಳು**

"ಮಕ್ಕಳೇ, ನಾಳೆ ಮನೆ ತುಂಬಿಸುವ ಕಾರ್ಯಕ್ರಮವಿದೆ. ಎಲ್ಲರೂ ಬೇಗ ಏಳುವಿರಿ ತಾನೇ? ಎದ್ದು ಸ್ನಾನಮಾಡಿ ಅಪ್ಪನ ಜೊತೆಯಲ್ಲಿ ತೆನೆತರಲು ಹೋಗಬೇಕು" ಎಂದು ಅಮ್ಮ ಹೇಳಿದಳು.

- ಎಂಬುದಾಗಿ ಬರೆಯಲಾಗಿದೆ. (3)
- ಯಾವುದಾದರೂ ಎರಡು ಲೇಖನ ಚಿಹ್ನೆಗಳನ್ನು ಸೂಕ್ತವಾಗಿ ಬಳಸಲಾಗಿದೆ. (2)
- ಲೇಖನ ಚಿಹ್ನೆಯನ್ನು ಬಳಸಲಾಗಿದೆ. (1)

**ಕಲಿಕಾ ಸಾಧನೆಗಳು**

ಗಾದೆಗಳು ಮತ್ತು ಒಗಟುಗಳನ್ನು ಅರ್ಥೈಸಿಕೊಂಡು ಅವುಗಳ ಸ್ವಾರಸ್ಯವನ್ನು ಹೇಳುವುದು ಮತ್ತು ಬರೆಯುವುದು.

**ಚಿಂತನಾ ಸಾಮರ್ಥ್ಯ**

ಗಾದೆಯ ಆಶಯವನ್ನು ಅರ್ಥೈಸಿ ಟಿಪ್ಪಣಿ ಬರೆಯುವುದು.

**ಘಟಕ 3**

6. ಸೋಮುವಿನ ಮಕ್ಕಳು ಜಗಳಗಂಟರಾಗಿದ್ದರು. ಇವರನ್ನು ತಿದ್ದಬೇಕೆಂದು ಯೋಚಿಸಿ, ಒಂದು ದಿನ ಅವನು ಒಂದು ಭಾರವಾದ ಮರದತುಂಡನ್ನು ಎತ್ತಲು ಪ್ರತಿಯೊಬ್ಬನಲ್ಲೂ ಹೇಳಿದನು. ಒಬ್ಬೊಬ್ಬರೂ ಪ್ರಯತ್ನಿಸಿ ಸೋತರು. ಕೊನೆಗೆ ಮೂವರು ಸೇರಿ ಅದನ್ನು ಸುಲಭವಾಗಿ ಎತ್ತಿದರು.
   ಈ ಮೇಲಿನ ಗದ್ಯಭಾಗವು ಯಾವಗಾದೆಮಾತಿಗೆ ಉದಾಹರಣೆಯಾಗಿದೆ? ಆ ಗಾದೆಮಾತನ್ನು ವಿಸ್ತರಿಸಿ ಟಿಪ್ಪಣಿ ಬರೆಯಿರಿ. 4

**ಮೌಲ್ಯಮಾಪನ ಸೂಚಕಗಳು**

- 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಗಾದೆಮಾತನ್ನು ಬರೆಯಲಾಗಿದೆ. (1)
- ಈ ಗಾದೆಮಾತಿನ ಆಶಯವನ್ನು ಸ್ಪಷ್ಟವಾಗಿ, ಸ್ವಂತ ಭಾಷೆ, ಶೈಲಿಯೊಂದಿಗೆ ಪ್ರಕಟಪಡಿಸಲಾಗಿದೆ. (3)
- ಗಾದೆ ಮಾತು ಬರೆದು ಆಶಯ ಸ್ಪಷ್ಟತೆ ಕಡಿಮೆ (2)
- ಗಾದೆ ಮಾತು ಮಾತ್ರ ಬರೆಯಲಾಗಿದೆ (1)

**ಕಲಿಕಾ ಸಾಧನೆಗಳು**

ವೈವಿಧ್ಯಮಯ ಸಾಹಿತ್ಯ ಪ್ರಕಾರಗಳನ್ನು ಓದಿ ಆಸ್ವಾದಿಸಿ, ಅವುಗಳಿಗೆ ಸಂಬಂಧಿಸಿದ ಟಿಪ್ಪಣಿ, ಪ್ರಬಂಧ ಇತ್ಯಾದಿಗಳನ್ನು ತಯಾರಿಸುವುದು.

**ಚಿಂತನಾ ಸಾಮರ್ಥ್ಯ**

ಪ್ರಶ್ನೆಯ ವಿಶ್ಲೇಷಣೆ, ಆಶಯವನ್ನು ಸ್ವಂತಭಾಷೆ ಶೈಲಿಯೊಂದಿಗೆ ಪ್ರಕಟಪಡಿಸುವುದು.

**ಘಟಕ 1**

7. ಕೆಳಗೆ ಕೊಡಲಾದ ಹೆಗ್ಗುರುತುಗಳ ಆಧಾರದಲ್ಲಿ 'ರಾಷ್ಟ್ರೀಯ ಭಾವೈಕ್ಯ' ಎಂಬ ವಿಷಯದ ಬಗ್ಗೆ ಲಿಖಿತ ಭಾಷಣ ತಯಾರಿಸಿರಿ.

ಒಂದು ರಾಷ್ಟ್ರ – ಭಿನ್ನ ಭಾಷೆ, ಭಿನ್ನ ವೇಷ – ಭಿನ್ನ ಆಚರಣೆಗಳು, ವಿವಿಧ ಜಾತಿ, ಮತಗಳು – ಎಲ್ಲರೂ ಭಾರತೀಯರೆಂಬ ಏಕತೆಯ ಭಾವ – ರಾಷ್ಟ್ರದ ಉಳಿವಿಗೆ ಐಕ್ಯತೆ ಅಗತ್ಯ – ವಿದ್ಯಾರ್ಥಿಗಳ ಪಾತ್ರ.

- ಇವರಲ್ಲಿ ನಿಮಗೆ ಇಷ್ಟವಾದ ಕಥಾಪಾತ್ರ ಯಾವುದು? ಯಾಕೆ?
- ಅವರ ಸ್ವಭಾವ ವಿಶೇಷತೆಗಳು.
- ಕಥೆಯಲ್ಲಿ ಇವರ ಸ್ಥಾನ – ಇತ್ಯಾದಿಗಳನ್ನೊಳಗೊಂಡ ಪಾತ್ರಚಿತ್ರಣ ಬರೆಯಿರಿ. (5)

**ಮೌಲ್ಯಮಾಪನ ಸೂಚಕಗಳು**

ಕೊಟ್ಟ ಹೆಗ್ಗುರುತುಗಳನ್ನು ಬಳಸಿ, ಸ್ವಂತ ಆಶಯವನ್ನು ಸೂಕ್ತವಾದ ಭಾಷೆ, ಶೈಲಿ ಪದ ಪ್ರಯೋಗದೊಂದಿಗೆ ಮತ್ತು ಸ್ವಂತ ಅಭಿಪ್ರಾಯದೊಂದಿಗೆ ಪ್ರಕಟಪಡಿಸಲಾಗಿದೆ. (5)

ಹೆಗ್ಗರುತುಗಳನ್ನು ಬಳಸಿ ಸೂಕ್ತವಾದ ಭಾಷೆ, ಶೈಲಿ ಪದಪ್ರಯೋಗದೊಂದಿಗೆ ಮತ್ತು ಸ್ವಂತ ಅಭಿಪ್ರಾಯದೊಂದಿಗೆ ಪ್ರಕಟಿಸಲಾಗಿದೆ. (4)

ಹೆಗ್ಗುರುತುಗಳನ್ನು ಬಳಸಿ, ಸೂಕ್ತವಾದ ಭಾಷೆ, ಶೈಲಿಯೊಂದಿಗೆ ಆಶಯ ಬರೆಯಲಾಗಿದೆ. (3)

- ಹೆಗ್ಗುರುತುಗಳನ್ನು ಬಳಸಿ, ಆಶಯ ಬರೆಯಲಾಗಿದೆ. (2)
- ಆಶಯ ಮಾತ್ರ ಬರೆಯಲಾಗಿದೆ. (1)

**ಕಲಿಕಾ ಸಾಧನೆಗಳು**

ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಆಶಯವನ್ನು ಶಿಷ್ಟಭಾಷೆಯಲ್ಲಿ ಬರೆದು ಮಂಡಿಸುವುದು.

**ಚಿಂತನಾ ಸಾಮರ್ಥ್ಯ**

ಪ್ರಶ್ನೆ ವಿಶ್ಲೇಷಿಸಿ, ಆಶಯ ಸಮಗ್ರತೆಯೊಂದಿಗೆ ಬರೆಯುವುದು.

**ಘಟಕ 2**

8. ಕೆಳಗೆ ಕೊಟ್ಟಿರುವ ಮಾಹಿತಿಗಳನ್ನು ಬಳಸಿ ಗೋಪಾಲಕೃಷ್ಣ ಗೋಖಲೆಯವರ ವ್ಯಕ್ತಿ ಪರಿಚಯವನ್ನು ಬರೆಯಿರಿ.

| | | |
|---|---|---|
| ಜನನ | : | 1866 |
| ಸ್ಥಳ | : | ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ. |
| ತಂದೆ – ತಾಯಿ | : | ಕೃಷ್ಣರಾಯರು ಮತ್ತು ಸತ್ಯಭಾಮ ಭಾಯಿ |
| ಪ್ರಾಥಮಿಕ ಶಿಕ್ಷಣ | : | ಕೊಲ್ದಾಪುರದ ಕಾಗಳೆ |
| ಮೆಟ್ರಿಕ್ಯುಲೇಶನ್ ಮತ್ತು ಎಫ್. ಎ | : | ಕೊಲ್ಲಾಪುರದ ರಾಜಾರಾಮ್ ವಿದ್ಯಾಲಯ |
| ಬಿ.ಎ. ಪದವಿ | : | 1884 ಬೊಂಬಾಯಿಯ ಎಲ್ಫಿನ್‌ಸ್ಟನ್ ಕಾಲೇಜು. |
| ವೃತ್ತಿ | : | ಪೂನಾದ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಅಧ್ಯಾಪಕರಾಗಿ ನೇಮಕ. ಫರ್ಗ್ಯೂಸನ್ ಕಾಲೇಜಿನಲ್ಲಿ ಗಣಿತ, ಇಂಗ್ಲಿಷ್ ಚರಿತ್ರೆಯ ಅಧ್ಯಾಪಕ. |
| ಸೇವೆ | : | 1905 ರಲ್ಲಿ 'ಭಾರತ ದೇಶ ಸೇವಕ ಸಮಾಜ' ದ ಸ್ಥಾಪನೆ ಆಫ್ರಿಕಾಕ್ಕೆ ಪ್ರಯಾಣ ಬೆಳೆಸಿ ಗಾಂಧೀಜಿಯವರಿಗೆ ಸಹಾಯ ದೇಶಕ್ಕಾಗಿ ಮಾಡಬೇಕಾದ ಕಾರ್ಯಗಳ ಕುರಿತು ಗಾಂಧೀಜಿಯವರಿಗೆ ಮಾರ್ಗದರ್ಶನ' |
| ಮರಣ | : | 19.02.1915 (5) |

**ಮೌಲ್ಯಮಾಪನ ಸೂಚಕಗಳು**

- ಎಲ್ಲ ವಿಚಾರವನ್ನು ಒಳಗೊಂಡು, ಆಶಯ ಪೂರ್ಣವಾಗಿ ಕ್ರಮೀಕರಿಸಿ ಟಿಪ್ಪಣಿ ಬರೆಯಲಾಗಿದೆ. (5)
- ಕ್ರಮೀಕರಿಸಿ ಟಿಪ್ಪಣಿ ಬರೆಯಲಾಗಿದೆ, ಆಶಯ ಸ್ಪಷ್ಟತೆ ಕಡಿಮೆಯಾಗಿದೆ. (4)
- ಕ್ರಮೀಕರಿಸಿ ಪೂರ್ಣವಾಕ್ಯಗಳಾಗಿ ಬರೆಯಲಾಗಿದೆ. (3)
- ಕ್ರಮೀಕರಿಸಿ ಬರೆಯಲಾಗಿದೆ. (2)
- ಕ್ರಮೀಕರಣವಿಲ್ಲದೆ ಬರೆಯಲಾಗಿದೆ. (1)

**ಕಲಿಕಾ ಸಾಧನೆಗಳು**

ಸೂಕ್ತವಾದ ಪದಪ್ರಯೋಗ, ಶೈಲಿ ಇತ್ಯಾದಿಗಳನ್ನು ಬಳಸಿ ವಾಕ್ಯಮಾಡುವುದು.

**ಚಿಂತನಾ ಸಾಮರ್ಥ್ಯ**

ಪ್ರಶ್ನೆಯನ್ನು ವಿಶ್ಲೇಷಿಸಿ ಭಾಷೆಯಲ್ಲಿ ಪ್ರಯೋಗಿಸುವುದು.

**ಘಟಕ – 2**

9. ಕೆಳಗೆ ಕೊಡಲಾದ ಸರಳ ವಾಕ್ಯಗಳನ್ನು ಸಂಯುಕ್ತ ವಾಕ್ಯವಾಗಿ ಬರೆಯಿರಿ.

ಮುಖ್ಯೋಪಾಧ್ಯಾಯರು ನೇರವಾಗಿ ತರಗತಿಗೆ ಬಂದರು. ತರಗತಿಯ ನಾಯಕ ಯಾರು ಎಂದು ಪ್ರಶ್ನಿಸಿದರು. (2)

**ಮೌಲ್ಯಮಾಪನ ಸೂಚಕಗಳು**

- ಅಗತ್ಯವಾದ ಬದಲಾವಣೆಯೊಂದಿಗೆ ಒಂದು ವಾಕ್ಯ ಮಾಡಿ ಬರೆಯಲಾಗಿದೆ. (2)
- ಬದಲಾವಣೆಯಿಲ್ಲದೆ ವಾಕ್ಯ ಬರೆಯಲಾಗಿದೆ. (1)

**ಕಲಿಕಾ ಸಾಧನೆ**

ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಆಶಯಗಳನ್ನು ಶಿಷ್ಟರೂಪದಲ್ಲಿ ಬರೆದು ಮಂಡಿಸುವುದು.

**ಚಿಂತನಾ ಸಾಮರ್ಥ್ಯ**

ಆಶಯವನ್ನು ಕ್ರೋಡೀಕರಿಸಿ, ಸ್ವಂತ ಭಾಷೆ, ಶೈಲಿಯೊಂದಿಗೆ ಪ್ರಕಟಪಡಿಸುವುದು.

**ಘಟಕ : 2**

10. ನೀವು ಸಂದರ್ಶಿಸಿದ ಯಾವುದಾದರೂ ಪ್ರೇಕ್ಷಣೀಯ ಸ್ಥಳವನ್ನು ವರ್ಣಿಸಿ ನಿಮ್ಮ ಗೆಳೆಯ/ ಗೆಳತಿಗೆ ಪತ್ರ ಬರೆಯಿರಿ. (4)

**ಮೌಲ್ಯಮಾಪನ ಸೂಚಕಗಳು**

- ಪತ್ರದ ಸ್ವರೂಪವಿದೆ (1)
- ಆಶಯ ಸಮಗ್ರತೆ, ಕ್ರಮಬದ್ಧತೆ, ಇದೆ ವರ್ಣನಾತ್ಮಕವಾಗಿ ಪ್ರಕಟಪಡಿಸಲಾಗಿದೆ. (3)
- ಪತ್ರದ ಸ್ವರೂಪವಿದ್ದು, ಆಶಯ ಸಮಗ್ರತೆ ಕಡಿಮೆ (2)
- ಪತ್ರದ ಸ್ವರೂಪವಿದೆ ಆಶಯವಿದೆ. (1)

***